**ಹೆಚ್ಚುವರಿ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕೋರ್ಟ,**
**ಬಸವನ ಬಾಗೇವಾಡಿ.**

ಸಿಸಿ ನಂಃ 611/2016

ಸಿಡಬ್ಲೂ 01 ಪಿಡಬ್ಲೂ 01

**ಸಾಕ್ಷಿಯನ್ನು ಇಂದು ದಿನಾಂಕಃ 17.09.2025 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.**
**ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದ**

1. ಸಾಕ್ಷಿಯು ನ್ಯಾಯಾಲಯ ಮುಂದಿರುವ ಒಂದು ಬಡಿಗೆ ಮತ್ತು ಕಲ್ಲನ್ನು ನೋಡಿ ಗುರುತಿಸಿರುತ್ತಾರೆ ಅವುಗಳನ್ನು ಕ್ರಮವಾಗಿ ಮು.ಮಾ-1 ಮತ್ತು 2 ಎಂದು ಗುರುತಿಸಲಾಯಿತು. ನಾನು ಆರೋಪಿತರನ್ನು ನೋಡಿದರೆ ಗುರುತಿಸಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಎಪಿಪಿ ರವರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿಸಿ ಪಾಟಿ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)**

**ಪಾಟೀ ಸವಾಲು ಎ.ಪಿ.ಪಿ ವಕೀಲರಿಂದ**

**1.** ದಿಃ **29.03.2016** ರಂದು ನನ್ನ ಮತ್ತು ಆರೋಪಿತರ ಮಧ್ಯ ಗಲಾಟೆಯಾಗಿರುತ್ತದೆ ಎಂದರೆ ಸರಿ**.** ಗಲಾಟೆಯಾದ ಮರುದಿನ ದಿಃ**30.03.2016** ರಂದು ಪೋಲಿಸರು ವೈಭವ ಆಸ್ಪತ್ರೆಗೆ ಬಂದು ನನ್ನ ಹೇಳಿಕೆಯ ದೂರನ್ನು ಪಡೆದಿರುತ್ತಾರೆ ಎಂದರೆ ಸರಿ**.**

**ಪಾಟಿ ಸವಾಲು:- ಆರೋಪಿತರ ಪರ ಶ್ರೀ ಎ ಜಿ ಎನ್ ವಕೀಲರಿಂದ ಃ-**

1. ಆರೋಪಿತರಗಳು ನನ್ನ ಅಣ್ಣ ತಮ್ಮಂದಿರು ಎಂದರೆ ಸರಿ. ನನ್ನ ಮತ್ತು ಆರೋಪಿತರ ಮಧ್ಯ ಆಸ್ತಿಗಳ ವಿಚಾರವಾಗಿ ವೈಮನಸ್ಸು ಇರುತ್ತದೆ ಎಂದರೆ ಸರಿ. ನನ್ನ ಸಹೋದರನಾದ ಶ್ರೀಶೈಲ್‌ರವರು ನಮ್ಮ ಕುಟುಂಬದ ಆಸ್ತಿಗಳಲ್ಲಿ ಭಾಗ ಕೇಳಿ ಮಾನ್ಯ ಸಿವಿಲ್ ನ್ಯಾಯಾಲಯ ಬಸವನ ಬಾಗೇವಾಡಿಯಲ್ಲಿ ಅಸಲು ದಾವೆ ಸಂಖ್ಯೆಃ295/2017 ರಂದು ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ನಾನು ನಮ್ಮ ವಕೀಲರು ಮೂಲಕ ಹಾಜರಾಗಿರುತ್ತೇನೆ ಎಂದರೆ ಸರಿ. ಆರೋಪಿತರು ಸದರಿ ದಾವೆಯಲ್ಲಿ ನಮ್ಮ ಕುಟುಂಬದ ಆಸ್ತಿಗಳನ್ನು ರಾಜಿ ಸಂಧಾನದ ಮೂಲಕ ಭಾಗ ಮಾಡಿಕೊಳ್ಳೋಣ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ನಾನು ರಾಜಿ ಸಂಧಾನಕ್ಕೆ ಒಪ್ಪಿಕೊಂಡಿಲ್ಲ ಎಂದರೆ ಸರಿಯಲ್ಲ.

2. ಕೊಡಗಾನೂರ ಗ್ರಾಮದ ಸರ್ವೇ ನಂ.153/6 ರ ಆಸ್ತಿಯು ನನ್ನ ಹೆಸರಿನಲ್ಲಿ ಇತ್ತು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ಆಸ್ತಿಯನ್ನು ನಾನು ಮತ್ತು ಆರೋಪಿತರು ಎಲ್ಲರೂ ಸೇರಿ ಮಾರಾಟ ಮಾಡಿರುತ್ತೇವೆ ಎಂದು ಹೇಳುತ್ತಾರೆ. ಸದರಿ ಆಸ್ತಿಯನ್ನು ನಾನು ಮತ್ತು ಆರೋಪಿತರು ಎಲ್ಲರೂ ಸೇರಿ ಮಾರಾಟ ಮಾಡಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕೊಡಗಾನೂರ ಗ್ರಾಮದ ಸರ್ವೇ ನಂ.130 ಆಸ್ತಿಯು ಈಗಲೂ ಸಹ ನನ್ನ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ಸರ್ವೇ ನಂ.130 ರ ಆಸ್ತಿಯಲ್ಲಿ ಕೊಳವೆ ಭಾವಿ ಮತ್ತು ಭಾವಿ ಇರುತ್ತದೆ ಎಂದರೆ ಸಾಕ್ಷಿಯು ಭಾವಿ ಮಾತ್ರ ಇರುತ್ತದೆ ಎಂದು ಹೇಳುತ್ತಾರೆ. ನಾನು ಆರೋಪಿತರಿಗೆ ಸರ್ವೇ ನಂ.153/6 ರ ಆಸ್ತಿಯಲ್ಲಿ ಭಾಗವನ್ನು ಕೊಡಬೇಕಾಗುತ್ತದೆ ಎಂಬ

ಕಾರಣದಿಂದ ಸದರಿ ಆಸ್ತಿಯನ್ನು ಮಲ್ಲಿಕಾರ್ಜುನ ನಂದಗಾವಿರವರಿಗೆ ಬಿಟ್ಟು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

3. ಸದರಿ ಕೊಡಗಾನೂರ ಗ್ರಾಮದ ಸರ್ವೇ ನಂ.150/6ರ ಆಸ್ತಿಗೆ ನೀರಿನ ಸೌಕಾರ್ಯವನ್ನು ಸರ್ವೇ ನಂ.130ರ ಆಸ್ತಿಯಲ್ಲಿರುವ ಭಾವಿ ನೀರನ್ನು ಉಪಯೋಗಿಸಿಕೊಂಡು ಸದರಿ ಆಸ್ತಿಯನ್ನು ನಾನೇ ಉಳುಮೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

4. ನಾನು ಈಗ ಕೊಡಗಾನೂರ ಗ್ರಾಮದಲ್ಲಿ ವಾಸವಾಗಿರುತ್ತೇನೆ. ನಾನು ಕೊಡಗಾನೂರ ಗ್ರಾಮದ ಸರ್ವೇ ನಂ.150/6ರ ಆಸ್ತಿಯಲ್ಲಿ ತಗಡಿನ ಶೆಡ್ಡನ್ನು ಹಾಕಿಕೊಂಡು ನಾನು ಮತ್ತು ನನ್ನ ಕುಟುಂಬದೊಂದಿಗೆ ವಾಸವಾಗಿರುತ್ತೇನೆ ಎಂದರೆ ಸಾಕ್ಷಿಯು ಸದರಿ ಜಮೀನನ್ನು ಖರೀದಿ ಹಿಡಿದವರಾದ ಮಲ್ಲಿಕಾರ್ಜುನ ನಂದಗಾವರವರು ನನಗೆ ಪಾಲಿನ ಆಧಾರದ ಮೇಲೆ ಕೊಟ್ಟಿರುತ್ತಾರೆ ಮತ್ತು ನಾನು ವಾಸವಾಗಿರುವ ಶೆಡ್ಡನ್ನು ಅವರೇ ಹಾಕಿಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ. ಸದರಿ ಜಮೀನನ್ನು ಮಲ್ಲಕಾರ್ಜುನ ನಂದಗಾವರವರು ಪಾಲಿನ ಆಧಾರದ ಮೇಲೆ ಕೊಟ್ಟಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ಆರೇಶಂಕರ ಗ್ರಾಮದ ಸರ್ವೇ ನಂ.82ರ ಆಸ್ತಿಯು ನನ್ನ ಹಸೆರಿನಲ್ಲಿ ಇರತ್ತದೆ ಎಂದರೆ ಸರಿಯಲ್ಲ. ದಿಃ 29.03.2016 ರಂದು ನಮ್ಮ ಕುಟುಂಬದ ಜಮೀನುಗಳನ್ನು ಭಾಗ ಮಾಡುವ ಉದ್ದೇಶದಿಂದ ಬಸವನ ಬಾಗೇವಾಡಿ ಕ್ರಾಸ್ ಹತ್ತಿರ ಹಿರಿಯರು ಸೇರಿದ್ದರು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆ ದಿನ ಆರೋಪಿತರು ನನಗೆ ಹೊಡೆದಿರುತ್ತಾರೆ ಎಂದು ಹೇಳುತ್ತಾರೆ. ಆ ದಿನ ಆರೇಪಿತರು ನನಗೆ ಹೊಡೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ

ಸರಿಯಲ್ಲ. 1ನೇ ಆರೋಪಿಯು ನಮ್ಮ ಕುಟುಂಬದ ಆಸ್ತಿಗಳಲ್ಲಿ ಭಾಗ ಕೊಡುವಂತೆ ನನಗೆ ಕೇಳಿರುತ್ತಾನೆ ಎಂದರೆ ಸರಿಯಲ್ಲ. ಆ ದಿನ ನಾನು 1ನೇ ಆರೋಪಿಯನ್ನು ನುಗುಸಿ ಹೊಡೆದಿರುತ್ತೇನೆ ಎಂದರೆ ಸರಿಯಲ್ಲ. 1ನೇ ಆರೋಪಿಯು ನನ್ನ ಮೇಲೆ ಕಂಪ್ಲೆಂಟ್‌ನ್ನು ಕೊಡುತ್ತಾನೆ ಎಂಬ ಉದ್ದೇಶದಿಂದ ನಾನೇ ಮೊದಲು ಹೋಗಿ ಆರೋಪಿತರ ವಿರುದ್ಧ ದೂರನ್ನು ಕೊಟ್ಟಿರುತ್ತೇನೆ ಎಂದರೆ ಸಾಕ್ಷಿಯು ಆಸ್ಪತ್ರೆಗೆ ಬಂದು ಪೋಲಿಸರು ನನ್ನ ಹೇಳಿಕೆಯನ್ನು ಪಡೆದಿರುತ್ತಾರೆ ಎಂದು ಹೇಳುತ್ತಾರೆ.

6. 1ನೇ ಆರೋಪಿಯು ಅಂಗವಿಕಲನಾಗಿರುತ್ತಾನೆ ಎಂದರೆ ಸರಿ.1ನೇ ಆರೋಪಿಯು ಅಂಗವಿಕಲನಾಗಿರುವುದರಿಂದ ಅವನು ನನಗೆ ಹೊಡೆಯುವ ಪ್ರಶ್ನೆಯೇ ಬರುವುದಿಲ್ಲ ಎಂದರೆ ಸಾಕ್ಷಿಯು 1ನೇ ಆರೋಪಿಯು ಸೈಕಲ್ ಮೋಟಾರ್ ನ್ನು ತಂದು ಹಾಯಿಸಿರುತ್ತಾನೆ ಎಂದು ಹೇಳುತ್ತಾರೆ. ಆರೋಪಿತರು ನನಗೆ ಯಾವುದೇ ರೀತಿಯಾಗಿ ಹಲ್ಲೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಕಲ್ಲು ಮತ್ತು ಬಡಿಗೆಯನ್ನು ಸಿಗುತ್ತವೆ ಎಂದರೆ ಸರಿಯಲ್ಲ. ಆ ದಿನ ಆರೋಪಿತರು ನನಗೆ ಯಾವ ಕಟ್ಟಿಗೆಯಿಂದ ಹೊಡೆದಿರುತ್ತಾರೆ ಎಂದು ಸಾಕ್ಷಿಯು ತೋಗಟೆಯಿಂದ ತೆಗೆದಿರುವ ಒಂದು ಬಡಿಗೆ ಇತ್ತು ಎಂದು ಹೇಳುತ್ತಾರೆ. ನನಗೆ ಕಲ್ಲಿನಿಂದ ಹೊಡೆದಿದ್ದಾರೆ ಎಂದು ಹೇಳುವ ಕಲ್ಲಿಗೆ ರಕ್ತ ಕಲೆ ಏನಾದರೂ ಇತ್ತ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ಕೆಳಗೆ ಬಿದ್ದಿರುತ್ತೇನೆ ಮತ್ತು ನನಗೆ ಪ್ರಜ್ಞೆ ಹೋಗಿತ್ತು ಎಂದು ಹೇಳುತ್ತಾರೆ.

7. ಮು.ಮಾ1 ಮತ್ತು 2ಕ್ಕೆ ಮತ್ತು ಈ ಪ್ರಕರಣಕ್ಕೂ ಯಾವುದೇ ರೀತಿಯ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿತರು ನನಗೆ ಯಾವುದೇ ಹೊಡೆ ಬಡಿ ಮಾಡದೇ ಇದ್ದರೂ ಕೂಡಾ ನಾನು ಆರೋಪಿತರಿಗೆ ಆಸ್ತಿಗಳಲ್ಲಿ ಭಾಗ ಕೊಡಬೇಕಾಗುತ್ತದೆ ಎಂಬ ಉದ್ದೇಶದಿಂದ ನಾನು ಆರೋಪಿತರ ವಿರುದ್ಧ

ಸುಳ್ಳು ದೂರನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಿಃ29.03.2016 ರಂದು ಈ ಘಟನೆ ಆಗಿರುತ್ತದೆ ಎಂದರೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ,

**ಹೆಚ್ಚುವರಿ ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,**
**ಬಸವನ ಬಾಗೇವಾಡಿ.**